# 1

# ಕ್ರಾಂತಿಕಾರಿ ಕ್ರೈಸ್ತತ್ವ ... ಐಶ್ವರ್ಯವಂತನಾದ ಯೌವನಸ್ಥ ಆಡಳಿತಗಾರನಿಗೆ ಅಗತ್ಯವಾದ ಧರ್ಮ

## (ಮತ್ತಾಯ 19:16-22)

*ರೂಪಾಂತವಾದ ಜೀವಿತವು ಸಮರ್ಪಿತವಾದ ಜೀವಿತವಾಗಿದೆ ...*

ನಮ್ಮಲ್ಲಿ ಅನ್ವಯಿಸಿಕೊಳ್ಳಲು ಬಯಸದ, ನಾಮ ವಿಶೇಷವೆಂದರೆ ಬಹುಶಃ ಇದು ಕ್ರಾಂತಿಕಾರಿಕ ಪದವಾಗಿದೆ! ಧರ್ಮದ ಬಗೆಗೆ ಕ್ರಾಂತಿಕಾರಕವಾಗಿರುವದು ಸುಕ್ಕಾದ ಸೂಟು, ಬಾಚದ ಕೂದಲು, ಆತನ ಅಂಗಿಯ ಮೇಲಿರುವ ಕಲೆ, ಕೊಳೆಯಾದ ಬೂಟಿನೊಂದಿಗೆ ಒಂದು ಮೂಲೆಯಲ್ಲಿ ನಿಂತುಕೊಂಡು ಬೈಬಲನ್ನು ಬಡಿಯುತ್ತಾ: "ಪಶ್ಚಾತ್ತಾಪಪಡಿರಿ ಇಲ್ಲವಾದರೆ ನಾಶವಾಗುವಿರಿ!" ಎಂದು ಕೂಗುತ್ತಿರುವ ವೃದ್ಧನ ಚಿತ್ರವು ನಮ್ಮ ಕಣ್ಣ ಮುಂದೆ ಇರುತ್ತದೆ. ಆದರೆ ನಾವು ಈ ರೀತಿಯಲ್ಲಿ ಇರುವುದಕ್ಕೆ ಬಯಸುವುದಿಲ್ಲ.

ಆದರೆ ನಿಜವಾದ ಪ್ರಶ್ನೆಯು: ಕರ್ತನಿಗೆ ಅವಶ್ಯವಾದುದ್ದು ಯಾವದು? ನಾವು "ಕ್ರಾಂತಿ ಕಾರಿಯಾಗಿರುವುದನ್ನು" ದೇವರು ಬಯಸುವವನಾಗಿದ್ದಾನೋ?

ಈ ಪ್ರಶ್ನೆಯನ್ನು ಯಥಾವತ್ತಾದ ರೀತಿಯಲ್ಲಿ ಇಟ್ಟಾಗ, ನಾನು ನಿಮಗೊಂದು ನಿಜವಾದ ಅನುಭವವನ್ನು ಹೇಳುವವನಾಗಿದ್ದೇನೆ. ಅನೇಕ ವರ್ಷಗಳ ಹಿಂದೆ ವಿದೇಶದಲ್ಲಿನ ಸೇವೆಯ ಕ್ಷೇತ್ರದಲ್ಲಿನ ಸಭೆಯೊಂದರಲ್ಲಿ ನಾವು ಕೆಲಸ ಮಾಡಿದೆವು. ಕೆಲವು ವರ್ಷಗಳ ಹಿಂದೆ, ಕೆಲ ದಿನಗಳ ನಂತರ ಆ ಕೆಲಸವನ್ನು ನಾವು ಬಿಟ್ಟುಬಿಟ್ಟೆವು. "ಸಂಪೂರ್ಣ ಸಮರ್ಪಣೆಯು" ಕ್ರಾಂತಿಯ ಅವಶ್ಯವಿರುವ ಆ ರೀತಿಯ ಕಾರ್ಯವನ್ನು ಅಮೇರಿಕದ ಬೋಧಕರು ಆ ಸಭೆಯವರು ಕೂಡಿಬರುತ್ತಿದ್ದ ಕಟ್ಟಡಕ್ಕೆ ನಾಲ್ಕು ಮೈಲಿ ಅಂತರದಲ್ಲಿ ಒಂದು ಸಭೆಯನ್ನು ಕಟ್ಟಿದರು. ಆ ಚಳುವಳಿಯ ಜನರು ತಮ್ಮನ್ನು ಕ್ರಾಂತಿಕಾರಿಗಳು ಎಂದು ಕರೆದುಕೊಂಡರು. ಅವರು ಬೋಧಿಸಿದ ಮತ್ತು ಪ್ರಾಯೋಜಿಸಿದ್ದ ಕೆಲ ಸಂಗತಿಗಳು ಕೆಲ ಪ್ರಶ್ನಾತೀತವಾದ ಆತ್ಮೀಕ ಕೆಲ ಸಂಗತಿಗಳು ಆಗಿದ್ದಾಗಲೂ ಕೂಡಾ ಆತ್ಮವನ್ನು ರಕ್ಷಿಸುವ ಶ್ರೇಷ್ಟವಾದ ಗುರಿಯನ್ನು ಹೊಂದಿದ್ದಾರೆ ಎಂದು ಪ್ರತಿಯೊಬ್ಬರೂ ಒಪ್ಪಬಹುದಾಗಿತ್ತು ಮತ್ತು ಹೇಳಬಹುದಾಗಿತ್ತು. ಸಂಪೂರ್ಣ ಸಮರ್ಪಣೆಯಾಗಿರುವುದರ ಅವರ ಘೋಷಣೆಯ ಬಗೆಗೆ ನಾವು ಅಸಮ್ಮತಿಯುಳ್ಳ ವರಾಗಿರಬಹುದು, ಆದರೆ ಅವರ ಸಂಪೂರ್ಣ ಮಹತ್ವದ ಒಡಂಬಡಿಕೆಯ ಬಗೆಗೆ ನಾವು ಅಸಮ್ಮತಿಯುಳ್ಳವರಾಗಿರಬಹುದೇ? ಮುಖ್ಯವಾಗಿ, ಅದೇ ರೀತಿಯ ಸಂಪೂರ್ಣ ಒಪ್ಪಿಸಿಕೊಳ್ಳುವಿಕೆಯ, ಅದೇ ಶ್ರೇಣಿಯನ್ನು ನಾವು ನಮ್ಮ ಸದಸ್ಯರಿಗೆ ಕೇಳಬಹುದೇ?

ನಾವು ಕೆಲಸ ಮಾಡುತ್ತಿದ್ದಂಥ ಚರ್ಚ್‌ನಿಂದ ದೂರವಿಲ್ಲದ ಸಭೆಯು ಆರಂಭವಾದಾಗ ಆ ಪ್ರಶ್ನೆಯು ನನಗೆ ಅರಿವಿಗೆ ಬಂತು. ನಾವು ಆ ಜನರಿಗೆ ಅವರ ಜವಾಬ್ದಾರಿಕೆಯನ್ನು ನಾವು ಪರಿವರ್ತಿಸುವುದನ್ನು ಕಲಿಸುವುದಕ್ಕೆ ನಾವು ಪ್ರಯತ್ನಿಸಿದೆವು; ಅದು ಅವರು ನಂಬಿಗಸ್ತರಾಗಿರವುದರಲ್ಲಿ, ಕೊಡುವುದರಲ್ಲಿ ಅವರು ಹಾಜರಾಗುವಲ್ಲಿ, ಅವರು ಇತರರನ್ನು ನಡೆಸುವದರಲ್ಲಿ, ಇದರಲ್ಲಿ ನಾವು ಸ್ವಲ್ಪಮಟ್ಟಿಗೆ ಯಶಸ್ವಿಯಾದೆವು. ಹೆಚ್ಚಾದ ಸಭೆಯಲ್ಲಿರುವಂತೆ ನಮ್ಮ ಸಹೋದರರರಲ್ಲಿ ಕೆಲವರು ಬಲು ಮಧ್ಯದವರು, ಇನ್ನು ಕೆಲವರು

ನಂಬಿಗಸ್ತರಾಗಿ ರಲ್ಲದವರೂ ಆಗಿದ್ದರು.

ಹೊಸ ಸಭೆಯು ಪ್ರಾರಂಭವಾದಾಗ, "ನಮ್ಮ ಕೆಲ ಸದಸ್ಯರ" ಅದನ್ನು ಸಂದರ್ಶಿಸಿದರು. ಕೆಲವರು ತಮ್ಮ ಸದಸ್ಯತ್ವವನ್ನು ಅಲ್ಲಿ ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿದರು, ಹೇಗೋ, ಅದರ ಬೋಧಕರು ಈ ಭಾವಿ ಸದಸ್ಯರಿಗೆ ಅದನ್ನು ಸರಳೀಕರಣ ಮಾಡಿದರು ಅದು, "ಅವರ ಸಭೆಯ" *ಪ್ರತಿಯೊಬ್ಬ* ಸದಸ್ಯನು ಭಾನುವಾರದ ಮುಂಜಾನೆಯ ಆರಾಧನೆಯಲ್ಲಾದರೂ ಉಪಸ್ಥಿತವಿರಬೇಕು ಮತ್ತು ವಾರದುದ್ದಕ್ಕೂ ಎರಡಾದರೂ ಸತ್ಯವೇದದ ಮನೆ ಅಭ್ಯಾಸವನ್ನು ಮಾಡಿಕೊಂಡಿರಬೇಕು ಹಾಗೂ *ಪ್ರತಿಯೊಬ್ಬ* ಸದಸ್ಯನು ಆತ್ಮವನ್ನು ಗೆಲ್ಲುವ ಆಕಾಂಕ್ಷೆಯನ್ನು ಹೊಂದಿರ ಬೇಕು ಮತ್ತು ಆ ಕಡಿಮೆ ಅವಧಿಗೆ ಹೊಂದುವಂತೆ ಕೆಲವರನ್ನಾದರೂ ಕ್ರಿಸ್ತನೆಡೆಗೆ ತರಬೇಕು.

ಆಗ ಏನಾಯಿತು ಎಂಬುದು ನಿಮಗೆ ಗೊತ್ತೋ? "ನಮ್ಮ ಸದಸ್ಯರು" ತಮಗೆ ಅದರಲ್ಲಿ ಯಾವ ಭಾಗವು ಬೇಡ ಮತ್ತು ತಾವು ... ಕೇವಲ ವಾರಕ್ಕೊಮ್ಮೆ ಬರುತ್ತಿದ್ದ ... ಅಥವಾ ಒಟ್ಟು ಹಾಜರಾಗದೇ ಇರುವ ... ಕಳೆದು ಹೋದವರನ್ನು ರಕ್ಷಿಸಲು ತಾವು ಏನು ಮಾಡದೇ ಇರುವಂಥ ಹಾಗಿದ್ದಾಗ್ಯೂ ಕೂಡಾ ಅವರು "ಒಳ್ಳೆಯ ಇರುವಿಕೆಯ" ಸದಸ್ಯರೆಂದು ಎಣಿಸಲ್ಪಡುವ "ನಮ್ಮ" ಸಭೆಗೆ ಹಿಂತಿರುಗುವ ನಿರ್ಧಾರವನ್ನು ಬೇಗನೇ ನಿರ್ಧರಿಸಿದರು.

ನಮ್ಮೊಡನೆ ಕೆಲಸಮಾಡುತ್ತಿದ್ದ ಸಭೆಯವರಿಗೆ ಹೇಗನಿಸಿರಬಹುದು ಎಂಬುದನ್ನು ನೀವು ಊಹಿಸಬಲ್ಲಿರಾ? ಅವರು ಈ ಮಿಶ್ರ ಅನುಭವದ ಬಗೆಗೆ ಮಾತನಾಡತೊಡಗಿದರು! ಈ ಹೊಸ ಗುಂಪು ಅದರ ಪ್ರಶ್ನಾತೀತ ತತ್ವಗಳಿಗಾಗಿ ಮತ್ತು ಅಭ್ಯಾಸಗಳಿಗಾಗಿ ನಾವು "ನಮ್ಮ ಸದಸ್ಯರನ್ನು" ಕಳೆದುಕೊಳ್ಳಲಿಲ್ಲ ಎಂದು ಒಂದೆಡೆ ನಾವು ಸಂತಸಪಟ್ಟೆವು. ಆದರೆ ಇನ್ನೊಂದೆಡೆ, ನಾವು ಈ ಜನರಿಗೆ ಆ ಎಲ್ಲಾ ವರ್ಷಗಳಲ್ಲಿ ಏನನ್ನು ಕಲಿಸಿದೆವು? ಉಗುರುಬೆಚ್ಚಗಿರುವಿಕೆಯು ಸರಿಯಾಗಿದೆ ಎಂದು ನಾವು ಅವರಿಗೆ ಕಲಿಸಿದೆವೆಯಾ? ನೀವು ಕ್ರಿಸ್ತನಿಗೆ ನಿಜವಾಗಿ ಒಡಂಬಡಿದೇ ಹೋದರೆ ಆತನು ನಿಮ್ಮನ್ನು ಗಮನಿಸುವೆನೋ? ಎಂದು ನಮಗೆ ಆಶ್ಚರ್ಯವಾಯಿತು. ನೀವು ನಂಬಿಗಸ್ತತನಿಂದ ಪಾಲ್ಗೊಂಡಿದ್ದೀರೋ ಇಲ್ಲವೋ, ಉದಾರತೆಯಿಂದ ಕೊಟ್ಟಿದ್ದೀರೋ, ಇತರರಿಗೆ ಬೋಧಿಸಿದ್ದೀರಾ ಎಂಬವುಗಳಲ್ಲಿ ಅದು ನಿಮ್ಮಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡದು. ಕ್ರೈಸ್ತತ್ವದ ಬಗೆಗೆ ಅರ್ಧಮನಸ್ಕರಾಗಿದ್ದರೂ ಸರಿ ಎಂದು ನಾವು ಅವರಿಗೆ ಬೋಧಿಸದೇ ಹೋದರೆ ಅವರು ಹೇಗೆ ಕಲಿಯಬಹುದು? ನಾವು ಏನನ್ನಾದರು ತಪ್ಪನ್ನು ಎಸೆಗಿದಾಗ - ನಾವು ತೊಡಗಿಸಿಕೊಳ್ಳಲು ಆರಂಭಿಸಿದ, ಶೈಶವಾಸ್ಥೆಯನ್ನು ಕಲಿಸಿದ, ತಾರುಣ್ಯದವರೆಗೂ ಮಾರ್ಗದರ್ಶನ ನೀಡಿದ, "ಸಂಪೂರ್ಣ ಸಮರ್ಪಣೆಯ" ವಿಚಾರವನ್ನು ಹೊಂದಿದಂಥ ಆ ಚರ್ಚಿನ ಸದಸ್ಯತ್ವವು ವಿಚಿತ್ರ ಮತ್ತು/ಅಥವಾ ಅಭಿಶಾಪವೇ?

ಆದರೆ ಆ ಸಭೆಯ ವಿಷಯವಾದ ಸಂಗತಿಯು ಸತ್ಯವಾದದ್ದು, ಸಾವಿರಾರು ಇತರ ಸಭೆಯವರ ಬಗೆಗೆ ನನಗೆ ಇದು ಖಚಿತವಾಗಿದೆ. ಈ ಸಭೆಯ ಬಗೆಗೆ ಏನು? ಈ ಕೆಳಗಿನ ಕೆಲವಾದರೂ ಅಂಶಗಳನ್ನು ನೀವು, "ಆ ಗೆರೆಯನ್ನು ದಾಟಬಾರದು" ಎಂದು - (1) ವಾರಕ್ಕೆ ನಾಲ್ಕು ಬಾರಿ ಹಾಜರಿ ಇರುವದು, (2) ಉದಾರವಾಗಿ ಕೊಡುವದು, (3) ಶುದ್ಧವಾದ ನೈತಿಕ ಜೀವನ, ಮತ್ತು (4) ಪ್ರಾಮಾಣಿಕ ಶ್ರಮವು ಇತರರನ್ನು ಕ್ರಿಸ್ತನೆಡೆಗೆ ತರುವದು - ಇವುಗಳನ್ನು ಮಾಡದೇ ಹೋದರೆ ನೀವು ಸಭೆಯ ಸದಸ್ಯರಲ್ಲ ಒಂದು ವೇಳೆ ಒಂದು ಭಾನುವಾರ ಮುಂಜಾನೆ ನಾವು ಉದ್ಘೋಷಣೆ ಮಾಡಿದ್ದಾದರೆ ಎಷ್ಟು ಜನರು "ವಿದಾಯ" ಹೇಳಬಹುದು ಮತ್ತು ಇನ್ನೊಂದು ಚರ್ಚನ್ನು ಹುಡುಕಬಹುದು?

ಅದನ್ನು ನಾನು ಹೀಗೆ ಮಾಡಬಹುದು: "ನಾನು ಬಿಟ್ಟುಬಿಡುತ್ತೇನೆ ಮತ್ತು ಅದಕ್ಕಾಗಿ ನಾನು ಸಮಜಾಯಿಸಿಯನ್ನೂ ಕೊಡುತ್ತೇನೆ ಯಾಕೆಂದರೆ ಆ ರೀತಿ ನಿಯಮವನ್ನು ಮಾಡುವುದಕ್ಕೆ ನನಗೆ ಯಾವ ಹಕ್ಕು ಇಲ್ಲ." ಎಂದು ನೀವು ಯೋಚಿಸಬಹುದು. ನೀವು ಸರಿಯಿರಬಹುದು.

ಆದರೆ ಅಲ್ಲಿ ಇನ್ನೊಂದು ಪ್ರಶ್ನೆಯಿದೆ: ನಿನ್ನನ್ನು ನೀನು ಕ್ರಿಸ್ತನ ಶಿಷ್ಯನು ಎಂದು ಕರೆದುಕೊಳ್ಳುವ ಕನಿಷ್ಟ ಅಂಶಗಳನ್ನಾದರೂ ಹೊಂದಿಕೊಳ್ಳುವಂತ ಒಳ್ಳೆಯ ಸಂಗತಿಗಳನ್ನು ನೀನು ಮಾಡದೇ ಹೋದರೆ ನಿನ್ನನ್ನು ನೀನು ಕ್ರೈಸ್ತನು ಎಂದು ಕರೆದುಕೊಳ್ಳುವ ಹಕ್ಕನ್ನು ಹೊಂದಿದ್ದೀಯಾ? ನೀನು ತೀವ್ರಗಾಮಿಯಾಗಿ ತನಗೆ ಒಪ್ಪಿಸಿಕೊಳ್ಳಬೇಕು ಎಂದು ಕ್ರಿಸ್ತನು ಕೇಳಿದನೋ? ಈ ಪ್ರಶ್ನೆಗಳಿಗೆ ಉತ್ತರಿಸಲು, ಮತ್ತಾಯ 19:16-22ರಲ್ಲಿ ಕಂಡುಬರುವ ಐಶ್ವರ್ಯವಂತನಾದ ತರುಣ ಅಧಿಕಾರಿಯ ಕಥೆಯನ್ನು ಓದುವತ್ತ ನಮ್ಮನ್ನು ನಡೆಸುವುದಾಗಿದೆ.

ಅನೇಕ ಸತ್ಯಗಳು ಈ ಕಥೆಯಿಂದ ಕಲಿಯಬಹುದಾಗಿದೆ.

## ಮನುಷ್ಯನು ಯಾವ ವಿಷಯವಾಗಿ ಜೀವಿಸುತ್ತಾನೋ ಆ ವಿಷಯಗಳು ರಕ್ಷಣೆಯನ್ನು ಒದಗಿಸಲಾರೆವು

ಈ ಮನುಷ್ಯನ ಬಗೆಗೆ ನೀವು ಹೇಳಬಹುದಾದ ಒಳ್ಳೆಯ ಸಂಗತಿಗಳು ಅಲ್ಲಿವೆ. (1) ಆತನು ಯೌವನಸ್ಥನಾಗಿದ್ದನು (ಮತ್ತಾಯ 19:22). (2) ಆತನು ಅಧಿಕಾರಿಯಾಗಿದ್ದನು (ಲೂಕ 18:18). (3) ಆತನು ಐಶ್ವರ್ಯವಂತನಾಗಿದ್ದನು (ಮತ್ತಾಯ 19:22; ಲೂಕ 18:23). (4) ನಾವು ಆತನ ಮಾತುಗಳನ್ನು ಒಪ್ಪಿಕೊಂಡಿದ್ದಾದರೆ - ಮತ್ತು ಹಾಗೆ ಮಾಡದಿರಲು ಅಲ್ಲಿ ಯಾವ ಕಾರಣಗಳು ಇರಲಿಲ್ಲ - ಆತನು ಒಳ್ಳೆಯ ಮನುಷ್ಯನಾಗಿದ್ದನು; ಆತನು ತನ್ನ ಒಡಂಬಡಿಕೆಯನ್ನು ಪಾಲಿಸಿದನು (ಮತ್ತಾಯ 19:18-20). (5) ಆತನು ರಕ್ಷಣೆಯನ್ನು ಹೊಂದಿಕೊಳ್ಳುವಿಕೆಯಲ್ಲಿ ಆತನು ಉತ್ಸುಕನಾಗಿದ್ದನು (ಮತ್ತಾಯ 19:16). (6) ನಿತ್ಯ ಜೀವವನ್ನು ಹೇಗೆ ಹೊಂದಿಕೊಳ್ಳಬೇಕು ಎಂಬುದರ ಮಾಹಿತಿಗಾಗಿ ಎಲ್ಲಿಗೆ ಹೋಗ ಬೇಕು ಎಂಬುದರ ಬಗೆಗೆ ಆತನು ತಿಳಿದಿದ್ದಾನೆ: ರಕ್ಷಣೆಯ ಮೂಲವು ಯೇಸುವೇ. (7) ರಕ್ಷಣೆಯನ್ನು ಹೊಂದಲು ಏನು ಮಾಡಬೇಕು ಎಂಬುದರ ಬಗೆಗೆ ಕಂಡುಕೊಳ್ಳಲು ಆತನು ಉತ್ಸುಕನಾಗಿದ್ದಾನೆ, ಮಾರ್ಕನು ನಮಗೆ ಹೇಳುವಂತೆ, ಆತನು ಯೇಸುವಿನ ಬಳಿ ಓಡಿಹೋದನು ಮತ್ತು ಆತನ ಮುಂದೆ ಮೊಣಕಾಲೂರಿದನು (ಮಾರ್ಕ 10:17). (8) ಯೇಸುವಿನ ಮುಂದೆ ಆತನು ಮೊಣಕಾಲೂರಿದನು ಮತ್ತು ಆತನನ್ನು "ಒಳ್ಳೆಯ ಬೋಧಕನು" ಎಂದು ಕರೆಯುವುದರ ಮೂಲಕ ಆತನು ಯೇಸುವಿನ ಚರಿತ್ರೆಯ ಮತ್ತು ಆತನ ವ್ಯಕ್ತಿತ್ವದ ಬಗೆಗೆ ಅಲ್ಪವನ್ನಾದರೂ ತಿಳಿದಿದ್ದನು (ಮಾರ್ಕ 10:17). (9) ಆತನು ಯೇಸುವಿನಿಂದ ಪ್ರೀತಿಸಲ್ಪಟ್ಟನು (ಮಾರ್ಕ 10:21).

ಈ ಎಲ್ಲವುಗಳು ಇದ್ದಾಗ್ಯೂ ಕೂಡಾ ಆತನು ಇನ್ನೂ ರಕ್ಷಣೆ ಹೊಂದದವನಾಗಿದ್ದಾನೆ! ಆತನು ಯೇಸುವಿನ ಬಳಿಗೆ ಬಂದು ನಿತ್ಯ ಜೀವ ಹೊಂದಲು ಏನು ಮಾಡಬೇಕು ಎಂದು ಯೇಸುವನ್ನು ಕೇಳಿದನು. ಯೇಸು ಆತನಿಗೆ: "ಅದರ ಬಗೆಗೆ ಚಿಂತಿಸಬೇಡ; ಅದನ್ನು ಈಗಾಗಲೇ ಹೊಂದಿದ್ದೀ ಎಂದು ಹೇಳಲಿಲ್ಲ." *ಆತನ ಐಶ್ವರ್ಯವು ಆತನನ್ನು ರಕ್ಷಿಸಲಿಲ್ಲ.* ಈ ವಾಸ್ತವವು ಯೆಹೂದ್ಯರನ್ನು ಆಶ್ಚರ್ಯಕ್ಕೀಡು ಮಾಡಿತು (ಮತ್ತಾಯ 19:25). ಅವರಿಗೋ, ಐಶ್ವರ್ಯವಂತನಾದ ಮನುಷ್ಯನು ಅಂದರೆ ನೀತಿವಂತ ನಾಗಿರುತ್ತಿದ್ದನು. ಐಶ್ವರ್ಯವಂತನು ತನ್ನದೆಲ್ಲವನ್ನೂ ಕಳೆದುಕೊಳ್ಳಬಹುದು ಎಂಬುದು ಅವರ ತಿಳುವಳಿಕೆ ಮೀರಿದ್ದಾಗಿತ್ತು. ಐಶ್ವರ್ಯವಂತನಾಗಿರುವಂತದ್ದು ಎಂದರೆ ಆ ವ್ಯಕ್ತಿಯ ರಕ್ಷಿಸಲ್ಪಟ್ಟವನು ಎಂದು ತಿಳಿದುಕೊಳ್ಳುವದು ಅನವಶ್ಯಕ ಎಂದು ತಿಳಿಯುವದು ನಮಗೆ ಅವಶ್ಯವಿದೆ. *ಆತನ ಅಧಿಕಾರವಾಗಲೀ ಅಥವಾ ಆತನ ಘನತೆಯಾಗಲೀ ಆತನನ್ನು ರಕ್ಷಿಸಲಿಲ್ಲ.* ಆತನು ತನ್ನ ಸಮಕಾಲೀನರ ದೃಷ್ಟಿಯಲ್ಲಿ ಶ್ರೇಷ್ಟ ವ್ಯಕ್ತಿಯಾಗಿರಬಹುದು. ಆಗಿದ್ದರೂ, ಆತನು ಇನ್ನು ರಕ್ಷಣೆ ಹೊಂದದವನಾಗಿದ್ದಾನೆ. ಅದು ನಿನಗೂ ಕೂಡ ನಿಜವಾದದ್ದು ಆಗಿದೆ. *ಆತನ ಯೌವನ ಆತನನ್ನು ರಕ್ಷಿಸಲಿಲ್ಲ.* ಯೌವನಸ್ಥರು ದೇವರನ್ನು ಹೇಗೆ ಸಂತುಷ್ಟಗೊಳಿಸಬೇಕೆಂದು

ತಿಳಿದಿದ್ದಾರೆ ಎಂಬುದು ಶ್ರೇಷ್ಟವಾದುದ್ದಾಗಿದೆ. ಆದರೆ ಕೇವಲ ಯೌವನಸ್ಥರಾಗಿರುವುದರಿಂದ ಮಾತ್ರ ದೇವರನ್ನು ಸಂತುಷ್ಟಗೊಳಿಸಬಹುದು ಎಂಬುದು ಸತ್ಯವಲ್ಲ.

*ಆತನ ಒಳ್ಳೆತನವೂ ರಕ್ಷಿಸಲಿಲ್ಲ.* ಮೊದಲು ಯೇಸು ಆತನಿಗೆ "ಆಜ್ಞೆಗಳನ್ನು ಪಾಲಿಸು" ಎಂದು ಹೇಳಿದನು. ಯೇಸು ಆ ಪಾರಿಭಾಷೆಯಲ್ಲಿ ಯಾಕೆ ಮಾತನಾಡಿದನು? ಯಾಕೆಂದರೆ ಆ ಐಶ್ವರ್ಯವಂತನಾದ ಅಧಿಕಾರಿಯು ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಜೀವಿಸುವವನಾಗಿದ್ದನು. ಆತನು ಯಾವ ಧರ್ಮಶಾಸ್ತ್ರದ ಅಡಿಯಲ್ಲಿ ಜೀವಿಸುತ್ತಾ ಇದ್ದಾನೋ ಅದನ್ನು ಆತನಿಗೆ ತೋರಿಸುವುದು ಯೇಸುವಿಗೆ ಯೋಗ್ಯವಾದದು ಆಗಿತ್ತು. ಆ ಯೌವನಸ್ಥನು "ಅವು ಯಾವವು?" ಎಂದು ಕೇಳಿದನು (ಮತ್ತಾಯ 19:18). ಮಾನವನು ವಿಧೇಯನಾಗಲೇ ಬೇಕಾದಂಥ ಮೋಶೆಯ ಧರ್ಮಶಾಸ್ತ್ರದ ಆಜ್ಞೆಗಳ ಆಧಾರಗಳನ್ನು ಯೇಸು ಕೊಟ್ಟನು. ಆ ಯೌವನಸ್ಥನು "ಬೋಧಕನೇ, ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ" ಎಂದು ಕೇಳಿದನು (ಮಾರ್ಕ 10:20). ಮೂಲತಹವಾಗಿ (ನಿಖರವಾಗಿರುವದು ಅವಶ್ಯವಾಗಿಲ್ಲ), ವಾಸ್ತವದಲ್ಲಿ ಆತನು ಹಾಗೆ ಮಾಡಿದ್ದನು ಎಂದು ನೀವು ತಿಳಿದುಕೊಳ್ಳಿರಿ. ನಂತರ ಆತನು, "ಇದರಲ್ಲಿ ಕಡಿಮೆಯಾಗಿರುವುದೇನು?" ಎಂದು ಕೇಳಿದನು (ಮತ್ತಾಯ 19:20). "ಹೆಚ್ಚಾದನ್ನು ಮಾಡಲು ಅಲ್ಲಿ ಏನೂ ಇಲ್ಲ, ನಾನು ಒಳ್ಳೆಯ ಮನುಷ್ಯನಾದುದರಿಂದ, ದೇವರು ಈಗಾಗಲೇ ನಿನ್ನನ್ನು ರಕ್ಷಿಸಿದ್ದಾನೆ" ಎಂದು ಯೇಸು ಅದಕ್ಕೆ ಉತ್ತರಿಸಲಿಲ್ಲ. ಬದಲಾಗಿ, ಯೇಸು ಅದಕ್ಕೆ ಇನ್ನಷ್ಟು ಹೆಚ್ಚಿನ ಸೂಚನೆಗಳನ್ನು ಕೊಟ್ಟನು. ಆತನು ಒಳ್ಳೆಯ ಮನುಷ್ಯನಾಗಿದ್ದಾಗಲೂ ಕೂಡಾ ಆತನು ಮಾಡಬೇಕಾದ ಕೆಲವುಗಳು ಇನ್ನೂ ಇದ್ದವು. ಒಳ್ಳೆಯತನವು ಆತನನ್ನು ರಕ್ಷಸಲಿಲ್ಲ!

ನಮ್ಮ ಜೀವಿತದಲ್ಲಿನ ಕೆಲ ಉದ್ದೇಶಗಳು, ಐಶ್ವರ್ಯ, ಅಧಿಕಾರ, ಖ್ಯಾತಿ, ಯೌವನ, ಒಳ್ಳೆತನ ಇವುಗಳಲ್ಲಿ ಯಾವವೂ ನಮ್ಮ ರಕ್ಷಣೆಗೆ ಖಚಿತತೆಯನ್ನು ಕೊಡಲಾರವು.

## ಯೇಸು ಮಾಡಿದ ಶ್ರೇಷ್ಟ ಕೋರಿಕೆಗಳು ಯಾವಾಗಲೂ ಪ್ರೀತಿಯಿಂದ ಕೊಡಲ್ಪಟ್ಟವುಗಳು ಆಗಿವೆ

ಮಾರ್ಕನು ಈ ಘಟನೆಯನ್ನು ದಾಖಲಿಸಿಕೊಂಡು ಹೇಳುತ್ತಾನೆ,

> ಯೇಸು ಆತನನ್ನು ದೃಷ್ಟಿಸಿನೋಡಿ ಪ್ರೀತಿಸಿ ಅವನಿಗೆ ನಿನಗೆ ಒಂದು ಕಡಿಮೆಯಾಗಿದೆ; ಹೋಗು, ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು, ... ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು (ಮಾರ್ಕ 10:21).

ಯೇಸು ಈ ದೊಡ್ಡ ಸಂಗತಿಯನ್ನು ಪ್ರೀತಿಯಿಂದ ಕೇಳಿದನು; ಹೀಗೆ ಮಾಡವದು ಆ ಯೌವನಸ್ಥನಿಗೆ ನಿಜವಾಗಿಯೂ ಒಳ್ಳೆಯದಾಗಿತ್ತು. ಯೇಸು ಅದನ್ನು ತಿಳಿದಿದ್ದನು, ಯಾಕೆಂದರೆ ಯೇಸು ಆತನನ್ನು ಪ್ರೀತಿಸುತ್ತಿದ್ದನು, ಅಂತೆಯೇ ಆತನಿಗೆ ಅದನ್ನು ಮಾಡಲು ಹೇಳಿದನು. ಯೇಸು ನಿನ್ನನ್ನೂ ಸಹ ಪ್ರೀತಿಸುತ್ತಾನೆ, ಮತ್ತು ಅಂತೆಯೇ ನಿಮಗೆ ಎಲ್ಲವುಗಳನ್ನೂ ಕೊಡಲು ಕೇಳಿದ್ದಾನೆ!

## ಹಣವು ಮಾನವರವನ್ನು ದೇವರ ರಾಜ್ಯದಿಂದ ದೂರವಿಡುವುದಾಗಿದೆ

ಹಣವು ಮಾನವರನ್ನು ರಕ್ಷಣೆ ಹೊಂದುವುದರಿಂದ ... ಮತ್ತು ಪರಲೋಕದಿಂದ ದೂರವಿಡುವುದಾಗಿದೆ. "ಓಹ್, ಇಲ್ಲ" ಎಂದು ಕೆಲವರು ಇದನ್ನು ವಿರೋಧಿ ಸುವವರಾಗಿದ್ದಾರೆ. ಇದನ್ನು ಮಾಡುವಂತಹದು ಆ ಹಣವಲ್ಲ, ಆದರೆ ಹಣದ ಪ್ರೀತಿಯಾಗಿದೆ. ನಾವು ಹೇಳವದು ಸರಿಯಷ್ಟೆ! ಇಲ್ಲಿನ ಸಮಸ್ಯೆಯೆಂದರೆ ನಮ್ಮ ಸಮಾಜವು - ನಮ್ಮ ಲಾಭದ ಹಸಿವಿನಿಂದ,

ಧನಪಿಶಾಚಿಯಂತೆ, ಯಶಸ್ಸಿನ ಆರಾಧರಕ ಸಮಾಜವಾಗಿದ್ದು - ಹಣವನ್ನು ನೀವು ಹೊಂದಿಸಿ ಬಿಡಿರಿ ಆದರೆ ಆದರ ಮೋಹದಿಂದ ದೂರವಿಡುವದು ಕಠಿಣವಾದುದು ಆಗಿದೆ. ಕರ್ತನು ಆ ಯೌವನಸ್ಥನಿಗೆ ಹೇಳಿದಂತ ಅದೇ ಸಂಗತಿಯನ್ನು ನಮಗೆ ಮಾಡಲು ಹೇಳಿದ್ದಾದರೆ ಆ ಯೌವನಸ್ಥನಂತೆಯೇ ಪ್ರತಿಕ್ರಯಿಸುವವರು ಎಷ್ಟು ಜನರು ನಮ್ಮಲ್ಲಿ ಇರಬಹುದು ಮತ್ತು ಅದೇ ಕಾರಣವನ್ನು ಕೊಡುವವರು ಇರಬಹುದೇ? ಹಣದ ಮೋಹವು ವಿಗ್ರಹಾರಾಧನೆಯಾಗಿದೆ ಮತ್ತು ವಿಗ್ರಹಾರಾಧನೆಯು ನರಕಕ್ಕೆ ಕಳಿಸಬಹುದಾಗಿದೆ ಎಂದು ನಾವು ಬಲ್ಲವರಾಗಿದ್ದೇವೆ! ಇದು ನಿನಗೂ ಸಂಭವಿಸಬಹುದೇ?

## ಪ್ರತಿಯೊಬ್ಬರಿಂದಲೂ ಅದನ್ನೇ ಕರ್ತನು ಬಯಸುವವನಾಗಿದ್ದಾನೆ

ಕರ್ತನು ಈ ಯೌವನಸ್ಥನ ಬಗೆಗೆ ಪ್ರತಿಯೊಂದನ್ನೂ ಕೇಳುವದು ನಿನಗೆ ಯೋಗ್ಯವೆನಿಸುತ್ತದೆಯೋ? ಆತನು ಯಾಕೆ ಇದನ್ನು ಕೇಳಿದನು? "ಯಾಕೆಂದರೆ ಕರ್ತನು ಆತನನ್ನು ಪ್ರೀತಿಸುತ್ತಿದ್ದನು" - ಮತ್ತು ಆ ಯೌವನಸ್ಥನ ಹೃದಯದೊಳಕ್ಕೆ ನೋಡಿದಾಗ, ಆತನು ದೇವರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಹಣವನ್ನು ಪ್ರೀತಿಸುವವನಾಗಿದ್ದನು ಎಂಬುದನ್ನು ಯೇಸು ನೋಡುವವನಾಗಿದ್ದನು, ಅದು ಆತನ ಹಣವಾಗಿದ್ದು ಅದು ಆತನ ಮತ್ತು ರಕ್ಷಣೆಯ ಮಧ್ಯದಲ್ಲಿ ನಿಂತುಕೊಂಡಿದ್ದಾಗಿತ್ತು. ಅಂತೆಯೇ ಆತನು ಅದರ ಸಲುವಾಗಿ ಕೇಳಿದನು. ಪ್ರಶ್ನೆಯು: ಯೇಸು ಆತನಿಗೆ ಕೇಳಿದ್ದು ಅತಿಯಾಗಿತ್ತೋ? ಉತ್ತರ: ಇಲ್ಲ! ಹಾಗೇನಾದರೂ ಆಗಿದ್ದರೆ ಯೇಸು ಅದಕ್ಕಿಂತ ಹೆಚ್ಚಿನದನ್ನು ಆತನಿಗೆ ಹಿಂತುರಿಗಿ ಕೊಡುವವನಾಗಿದ್ದನು!

ಆದರೆ, ಯೇಸು ಆ ಪ್ರತಿಯೊಂದನ್ನು ಕೇಳಲಿಲ್ಲ! ಓಹ್, ಹೌದು, ಆತನು ಹಾಗೆಯೇ ಮಾಡಿದ! ಆಗ, ನಿನಗಿರುವ ನಿನ್ನದೆಲ್ಲವನ್ನೂ ಎಂದರೆ ನಿನ್ನ ಕಾರು, ನಿನ್ನ ಮನೆ ಮುಂತಾದವುಗಳೆಲ್ಲವನ್ನು ಮಾರು ನಿನ್ನ ಬ್ಯಾಂಕಿನಲ್ಲಿರುವ ನಿನ್ನ ಹಣವನ್ನು ತೆಗೆದುಬಿಡು ಎಂದಾಗ ನಾನು ಅದರ ಅರ್ಥವನ್ನು ಗ್ರಹಿಸಲಿಲ್ಲ. ಯೇಸು ನೀನು ಹೊಂದಿರುವ ಪ್ರತಿಯೊಂದನ್ನು ಅದೇ ರೀತಿಯಲ್ಲಿರುವುದನ್ನು ಕೇಳುವವನಾಗಿದ್ದಾನೆ ಎಂದು ನಾವು ತ್ವರಿತಗತಿಯಲ್ಲಿ ಹೇಳಬಿಡಬಹುದು!

ಎಲ್ಲವುಗಳಿಗಿಂತ ಹೆಚ್ಚಾಗಿ ನೀನು ದೇವರನ್ನು ಪ್ರೀತಿಸುವವನಾಗಬೇಕು ಎಂದು ಆತನು ಹೇಳುತ್ತಾನೆ! (ಮತ್ತಾಯ 22:37). ನೀನು ಮೊದಲು ದೇವರ ರಾಜ್ಯವನ್ನು ನೋಡುವವನಾಗು (ಮತ್ತಾಯ 6:33)! ನಿನ್ನ ಮನೆ, ನಿನ್ನ ದೇಶ, ನಿನ್ನ ತಂದೆತಾಯಿಗಳು, ನಿನ್ನ ಗಂಡ ಅಥವಾ ಹೆಂಡತಿ, ನಿನ್ನ ಮಕ್ಕಳು, ನಿನ್ನ ಹೊಲ, ನಿನ್ನ ಹಣ, ನಿನ್ನ ಸ್ವಂತ ಜೀವಿತಕ್ಕಿಂತಲೂ ಹೆಚ್ಚಾಗಿ ಕರ್ತನನ್ನು ಪ್ರೀತಿಸು (ಲೂಕ 14:26, 27, 33)! ಹೊಸ ಒಡಂಬಡಿಕೆಯ ಪ್ರಕಾರ, ಒಬ್ಬ ಕ್ರೈಸ್ತನು "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" (ಗಲಾತ್ಯ 2:20) ಎಂದು ಹೇಳುವವನೂ; "ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೇ" (ರೋಮಾಪುರ 14:8) ಎಂದು ಹೇಳುವಂತವನೂ; "ನನಗಂತೂ ಬದುಕುವುದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ" (ಫಿಲಿಪ್ಪಿ 1:21) ಎಂದು ಹೇಳುವವನೂ ಆಗಿರುತ್ತಾನೆ.

ಈ ಸಂಗತಿಗಳು ನಿಜವಾದದ್ದರೆ (ಮತ್ತು ಅವು ಆಗಿವೆ!), ಕರ್ತನು ಆ ತರುಣ ಅಧಿಕಾರಿಗೆ ಮಾಡಿದ್ದಕ್ಕಿಂತ ಕಡಿಮೆಯಾದ್ದನ್ನು ನಿಮಗೆ ಕೇಳಿದ್ದಾನೋ? ನೀನು ಹೊಂದಿರುವ ನಿನ್ನದೆಲ್ಲವನ್ನೂ ಮಾಡಬೇಕಾಗಿಲ್ಲ, ಆದರೆ ನೀನು ಹೊಂದಿರುವ ಎಲ್ಲವನ್ನೂ ಕ್ರಿಸ್ತನಿಗೋಸ್ಕರ ಬಳಸು, ನಿನ್ನದೆಲ್ಲವನ್ನೂ ನಿನ್ನನ್ನು ಒಳಗೊಂಡು ಕರ್ತನಿಗೆ ಸಮರ್ಪಣೆ ಮಾಡಿಕೋ! ಇದನ್ನೇ ಯೇಸು ಆ ತರುಣ ಅಧಿಕಾರಿಗೆ ಹೇಳಿದ್ದು, ಮತ್ತು ಅದನ್ನೇ ನಿನಗೂ ಮತ್ತು ನನಗೂ ಕೇಳುವವನಾಗಿದ್ದಾನೆ!

ಇದು ಕ್ರಾಂತಿಕಾರಿ ಎಂದು ನಿನಗನ್ನಿಸುತ್ತಿದೆಯಾ? ಹೌದು ಆಗಿದೆ!

ನಿಯಮಾನುಸಾರವಾಗಿ ಕ್ರಾಂತಿಕಾರಿ ಯಾಗಿರುವುದನ್ನು ನಾವು ಬಯಸುವೆವು. ನಾವು ನಮ್ಮ ಕ್ರೂಜೆಯನ್ನು, ಅವುಗಳು ಮೆತ್ತಗಿರುವವರೆಗೆ, ನೆಟ್ಟಗೆ ಹೊಂದಿಕೆಯಾಗುವವರೆಗೆ, ನವೀನವಾಗಿರುವವರೆಗೆ, ಸರಿಯಾಗಿ ಇರುವವರೆಗೆ ಶ್ರೇಷ್ಟಮಟ್ಟದ್ದಾಗಿರುವವರೆಗೆ ಹೊರುವವರಾಗಿದ್ದೇವೆ. ಆದರೆ ನಾವು ಕ್ರಾಂತಿಕಾರಿಯಾಗಿರುವುದು ಬೇಡ! ನಾವು ಸುಲಭವಾದ, ಸಂಪ್ರದಾಯ ಬದ್ಧವಾದ ಕೆಣಕದಂತಹ, ಯೋಗ್ಯ ವಿಚಾರವುಳ್ಳದ್ದನ್ನು ನಾವು ಹೊಂದಿದ್ದು, ಇದ್ದದ್ದನ್ನು ಕೆಡಿಸದೆ ಇರುವ ನವುರವಾದ ಮೆದುವಾದ ಜಗತ್ತನ್ನು ಅಲುಗಾಡಿಸದ ನಂಬುಗೆಯನ್ನು ಹೊಂದಿರುತ್ತೇವೆ. ಆದರೆ ಕ್ರಾಂತಿಕಾರಿಯಾಗಿರುವುದು ಬೇಡವೋ? ಬೇಡ, ವಂದನೆಗಳು! ಪ್ರತಿಯೊಂದು ಉಸಿರಿಗೂ "ದೇವರಿಗೆ ಸ್ತೋತ್ರ" ಎಂದು ಜನರು ಹೇಳುವುದನ್ನು, ಮತ್ತು "ಈ ಎಲ್ಲಾ ಜನರಲ್ಲಿ ನಾನೂ ಕೂಡ ಒಬ್ಬನಾಗಿಲ್ಲ ಅದಕ್ಕೆ ದೇವರೇ ನಿನಗೆ ವಂದನೆಗಳು" ಎಂದು ಪಿಸುನುಡಿಯುವುದನ್ನು ಕೇಳಿದ್ದೇವೆ. ಜನರು ಎಲ್ಲಡೆಯಲ್ಲಿ, ದಿನಸಿ ಅಂಗಡಿಯಲ್ಲಿ ಕೂಡಾ ಯೇಸುವಿಗೆ ಸಾಕ್ಷಿಕೊಡುವುದನ್ನು ಮತ್ತು ನೀವು ರಕ್ಷಣೆ ಹೊಂದಿದ್ದೀರಾ? ಎಂದು ಜನರನ್ನು ಕೇಳುವುದನ್ನು ನಾವು ನೋಡಿದ್ದೇವೆ ಮತ್ತು ನಾವು ಆತ್ಮದಲ್ಲಿ ಮುದುಡಿಕೊಳ್ಳುತ್ತೇವೆ ಹಾಗೂ "ಪ್ರತಿಯೊಬ್ಬರಿಗೂ ಕಾಣಿಸಲ್ಪಡುವದು ಎಷ್ಟು ಹಾಸ್ಯಾಸ್ಪದವಾಗಿದೆ" ಎಂದು ಯೋಚಿಸಿಕೊಳ್ಳುತ್ತೇವೆ. ಬೀದಿಯುದ್ದಕ್ಕೂ ಸಾಗಿ ಮನೆಗಳ ಕದ ತಟ್ಟಿ ತಮ್ಮ ಧರ್ಮದ ಮೇಲಿನ ವುಗಳನ್ನು "ಮಾರಲು" ಯತ್ನಿಸುವುದನ್ನು ನಾವು ನೋಡಿ ದ್ದೇವೆ ಹಾಗೂ "ಎಂಥ ದಡ್ಡತನ"! ಎಷ್ಟು ಸಾಮಾನ್ಯವಾದುದ್ದು! ಎಂಥ ಅಸಹ್ಯವಾದುದ್ದು! ಎಂಥ ಅನುಪಯುಕ್ತವಾದುದ್ದು! "ನಾನು ಇದನ್ನು ಮಾಡುವುದರಲ್ಲಿ ಸಿಕ್ಕಿ ಸಾಯಲಿಲ್ಲ" ಎಂದು ಯೋಚಿಸುವವರಾಗಿರುತ್ತೇವೆ. ಮತ್ತು ನಾವು ಇದನ್ನು ಮಾಡುವಾಗ ಜೀವಂದಿದಾಗದಲಿ ಅಥವಾ ಸತ್ತಾಗಲೀ ಸಿಕ್ಕಿಬೀಳುವದಿಲ್ಲ. ಆಗ ಅಂಥ ನಿಶ್ಚಿತ ಪ್ರದರ್ಶನಗಳಿಗೆ ಹೋಗದ, ನಿಶ್ಚಿತವಾದ ಬಟ್ಟೆಗಳನ್ನು ಧರಿಸಿದ ... ಯಾವುದೇ ಕಾರಣಕ್ಕಾಗಿ ಚರ್ಚನ್ನು ತಪ್ಪಿಸದ ... ತಮಗೆ ತಪ್ಪೆಸಿಗಿದವರ ಮೇಲೆ ಪ್ರತಿಕಾರ ತೀರಿಸಿ ಕೊಳ್ಳದ ... ಧಾರ್ಮಿಕ ಜನರು ಅಲ್ಲಿರುತ್ತಾರೆ ... ಮತ್ತು "ಇವರಂಥ ಕ್ರಾಂತಿಕಾರಿಗಳು! ನಾನು ಹಾಗಿಲ್ಲದ್ದಕ್ಕೆ ಸಂತೋಷಿಸುತ್ತೇನೆ" ಎಂದು ನಾವು ಯೋಚಿಸುತ್ತೇವೆ!

ನನ್ನ ಪ್ರಶ್ನೆಯು: ಯಾವದು ಕ್ರಿಸ್ತನನ್ನು ಮತ್ತು ಆದಿ ಸಭೆಯನ್ನು - ನಾನು ಈಗ ತಾನೇ ವರ್ಣಿಸಿರುವ ಕ್ರಾಂತಿಕಾವಾದ ಕ್ರೈಸ್ತತ್ವವನ್ನೋ ... ಅಥವಾ ನಮ್ಮಲ್ಲಿ ಅನೇಕರ ಆಚರಣೆಯಲ್ಲಿರುವ ಅರೆಮನಸ್ಕರು, ಸಾಮಾಜಿಕವಾಗಿ ಸ್ವೀಕೃತವಾದವರು, ನೆಮ್ಮದಿಯಾದ ಧರ್ಮವನ್ನು ಪಾಲಿಸುವವರೋ? ಅದಕ್ಕೆ ಉತ್ತರಿಸಿರುವುದಕ್ಕಾಗಿ ಯೋಚಿಸಿರಿ, ಯೇಸು ಕ್ರಾಂತಿಕಾರಿಯೇ ಕ್ರೂಜೆಹಿಡಿದು ಸಾಗುವಲ್ಲಿ ಸಮಾಜಿಕ ವಾದ ಒಪ್ಪಿಸಿಕೊಳ್ಳುವ ಧರ್ಮವನ್ನು ಆತನು ಪಾಲಿಸಿದನೇ? ಪೌಲನು ಕ್ರಾಂತಿಕಾರಿಯಾಗಿದ್ದನೇ? ಆತನ ಸಂದೇಶ ಮತ್ತು ಕಾರ್ಯದ ಬಗೆಗೆ ಉಗ್ರನಾಗಿರುವ ಕಾರಣದಿಂದ ಆತನನ್ನು ಒಂದು ಸಾರಿ ತಲೆಹಿಡುಕ ಎಂದು ಜನರು ತೆಗಳಿಲ್ಲವೇ? (ಅಪೊಸ್ತಲರ ಕೃತ್ಯಗಳು 26:24). ಆದಿ ಸಭೆಯು ಕ್ರಾಂತಿಕಾರಿಯಾಗಿರಲಿಲ್ಲವೇ? ಬೈಬಲ್ ಅವರಿಗೆ "ಲೋಕವನ್ನು ಅಲ್ಲೋಕಲ್ಲೋಲ ಮಾಡಿರಿ" ಎಂದು ಹೇಳಲಿಲ್ಲವೇ? (ಅಪೊಸ್ತಲ ಕೃತ್ಯಗಳು 17:6). ಯೌವನಸ್ಥ ತರುಣ ಅಧಿಕಾರಿಗೆ ಎಲ್ಲವನ್ನೂ ಮಾರಲು ಹೇಳಿದ್ದು, ಕ್ರಾಂತಿಕಾರಿಕ ಬೇಡಿಕೆಯಲ್ಲವೇ? ಯೇಸು ಆತನನ್ನು ಎಲ್ಲರ ಮುಂದೆ ಜೊತೆಯಲ್ಲಿ ಇಡಲು ಕೇಳಿದಾಗ ಅದು ಕ್ರಾಂತಿಕಾರಕವಾದುದ್ದು ಆಗುವುದಿಲ್ಲವೇ? ನಾನು ನನ್ನ ಪ್ರಕರಣವನ್ನು ಇಲ್ಲಿಗೆ ಇರಿಸುತ್ತೇನೆ.

## ಯೇಸು ಕ್ರಿಸ್ತನು ಕ್ರಾಂತಿ ಕಾರಕ ಬೇಡಿಕೆಗಳನ್ನು ಒಪ್ಪಿಕೊಳ್ಳುವಿಕೆಯು ನಮ್ಮ ಮೇಲಿದೆ

ಆ ಯೌವನಸ್ಥನು ಯೇಸುವಿನ ಬೇಡಿಕೆಯನ್ನು ಒಪ್ಪಿಕೊಳ್ಳಲಿಲ್ಲ "ಆ ಯೌವನಸ್ಥನು ಬಹಳ ಆಸ್ತಿಯುಳ್ಳವನಾದ್ದರಿಂದ ಈ ಮಾತನ್ನು ಕೇಳಿ ಬಹು ದುಖದಿಂದ ಹೊರಟು ಹೋದನು" (ಮತ್ತಾಯ 19:22). ಕರ್ತನಿಗೆ ಮತ್ತು ಆತನ ಚರ್ಚಿಗೆ ಎಂಥ ಹಾನಿ! ಯೇಸುವಿಗೆ ಸ್ಥಾನಕೊದೇ ತನಗಾಗಿ ಮೀಸಲಿಡುವದಾದರೆ ಆ ಯೌವನಸ್ಥನು ಎಷ್ಟು ಒಳ್ಳೆಯದನ್ನು ಮಾಡಬಹುದಿತ್ತು! ಆದರೆ ದೊಡ್ಡ ಹಾನಿಯು ಆ ಯೌವನಸ್ಥನು ತನ್ನಷ್ಟಕ್ಕೆ ತಾನೇ ಮಾಡಿಕೊಂಡನು. ಆತನು ಆಶೀರ್ವದಿಸಲ್ಪಡುವ (ಮತ್ತಾಯ 19:21, 29) ಮತ್ತು ಕರ್ತನಿಗಾಗಿ ಬಳಿಕೆಯಾಗುವ ಅವಕಾಶದಿಂದ ತಪ್ಪಿಸಿಕೊಂಡನು. ಬಲು ಮಹತ್ವದ್ದೆಂದರೆ ಆತನು ನಿತ್ಯಜೀವವನ್ನು ಹೊಂದುವ ಅವಕಾಶದಿಂದ ತಪ್ಪಿಸಿಕೊಂಡನು. ಬದಲಾಗಿ, ತಾನು ದುಃಖವುಳ್ಳವನಾಗಿರಲು ಆತನ ಕಾರಣವಿರುವುದನ್ನು ಆತನು ಅರಿತುಕೊಂಡನು. ನಿನಗೆ ಯೇಸು ನಿನ್ನದೆಲ್ಲವನ್ನೂ ಕೊಡಲು ಕರೆಯಿತ್ತಾಗ ನೀನುಹೇಗೆ ವರ್ತಿಸುವೆ? ನೀನು ಸಂಪೂರ್ಣ ಸಮರ್ಪಣಾಭಾವದಿಂದ ಆತನೆಡೆಗೆ ತಿರುಗಿಕೊಳ್ಳುವಿಯಾ, ಅಥವಾ ಆ ಯೌವನಸ್ಥನಂತೆ ಹೊರಗೆ ಹೋಗುವಿಯಾ? ಇದು ನಿನಗೆ ಬಿಟ್ಟದ್ದು!

## ಮುಕ್ತಾಯ

ನಾನು ಈ ಪಾಠದ ಮೂಲಕ ಏನನ್ನು ಸಂಪೂರ್ಣ ಗೊಳಿಸಲು ಆಶಿಸಿರುವೆನು? ಮೂರು ಗುರಿಗಳು:

ಮೊದಲನೆಯದು, ನೀನು ಯೋಚಿಸುವುದಕ್ಕೆ ಕಾರಣ ನಿನ್ನ ಕ್ರೈಸ್ತತ್ವದ ಪರಿಕಲ್ಪನೆಯ ಬಗೆಗೆ ವಿಚಾರಿಸಬೇಕು ಎಂದು ನಾನು ಅಪೇಕ್ಷಿಸುತ್ತೇನೆ: ಜಗತ್ತಿನಲ್ಲಿ (ಇದು ಜಗತ್ತಿನಲ್ಲಿ ಇರುವುದೇ ಆಗಿದೆ; ಪರಲೋಕದಿಂದ ಬಂದದ್ದಲ್ಲ.) ಕ್ರಿಸ್ತನು ನಿನ್ನಿಂದ ಅತೀ ಕಡಿಮೆಯಾದದ್ದನ್ನು ಅಪೇಕ್ಷಿಸುತ್ತಾನೆ ವಿಚಾರ ನಿನಗೆ ಹೇಗಾದರು ಬಂತು? (ಇದು ಲೋಕದಿಂದ ಬಂದ ವಿಚಾರವೇ ಹೊರತು ಪರಲೋಕದ ವಿಚಾರವಲ್ಲ) ಕ್ರೈಸ್ತತ್ವವು, ಸುಲಭವಾದುದು, ಸವಾಲುರಹಿತವಾದದ್ದು. ಅಕ್ರಮಣಕಾರಿಯಲ್ಲದ್ದು ಎಂಬ ವಿಚಾರ ನಿನಗೆ ಹೇಗಾದರೂ ಬಂದಿತು? ಬೈಬಲ್ ಕ್ರಿಸ್ತನ ಧರ್ಮದ ಅವಶ್ಯಕತೆಗಳ ಬಗೆಗೆ ಹೊಂದಿರುವ ಸಂಗತಿಗಳನ್ನು ಏನು ಹೇಳುವುದು ಎಂಬುದರ ಬಗೆಗೆ ಯೋಚಿಸಿರಿ.

ಎರಡನೆಯದಾಗಿ, ನಿನಗೆ ಈ ವಿಷಯಗಳು ಅಸಮಂಜಸ ಎಂದು ಅನ್ನಿಸಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ಕೇವಲ ನಿನ್ನ ಸಂಗಡ ಸಲುವಾಗಿ ನಾನು ನಿನ್ನನ್ನು ಚರ್ಚಿನಿಂದ ಮನೆಯಲ್ಲಿ ಇರಿಸಲು ಬಯಸಲಾರೆ; ಆದರೆ ಹಾಗೆ ಮಾಡುವುದರಿಂದ ನಿನಗೆ ಅಸಂತೋಷ ವೆನ್ನಿಸಲು ನಿನಗೆ ಆರಂಭಿಸಿದ್ದಾದರೆ, ಇದು ಸರಿಯಾದ ದಿಶೆಗೆ ಒಂದು ಹೆಜ್ಜೆಯಾಗಿದೆ. ಭಾನುವಾರದ ಸಂಜೆಯ ಆರಾಧನಾ ಸಭೆಗೆ ಬರಲು ಆರಂಭಿಸುವಂತೆ ನಾನು ಕಾರಣವಾ ಗಲಾರೆ. ಆದರೆ ನಿನಗೆ ಮನೆಯಲ್ಲಿ ಇರುವದು ಅಸೌಖ್ಯವಾಗಿದ್ದರಿಂದ ನೀನು ಬರುವುದಾದರೆ ಅದು ಸರಿ. ಹಾಗಾದಲ್ಲಿ ಬಹುಶಃ ನಿನಗೆ ಅಸೌಖ್ಯವಾಗಿರುವದು ನಿನಗೆ ಅನಿಸಬೇಕು; ಎಲ್ಲಕ್ಕಿಂತಲೂ, ದೇವರ ಚಿತ್ತವನ್ನು ಮಾಡದೇ ಇರುವುದಕ್ಕೋಸ್ಕರದ ನಿನ್ನ ಬಲಹೀನ ನೆವಗಳನ್ನು ದೇವರು ಒಪ್ಪುತ್ತಾನೆ ಎಂಬ ವಿಚಾರವನ್ನು ನೀನು ಎಲ್ಲಿಂದ ಪಡೆದಿರುವಿ? ಎಲ್ಲಕ್ಕಿಂತ ಹೆಚ್ಚು: ನೆವಗಳನ್ನೂ ಕೊಡದೇ ಆತನ ಚಿತ್ತವನ್ನು ನಿರಾಕರಿಸುವ ವಿಚಾರ ಎಲ್ಲಿಂದ ನಿನಗೆ ಬಂದಿತು?

ಮೂರನೆಯದಾಗಿ, ನೀನು ಕಾರ್ಯಗತನಾಗಬೇಕೆಂದು ನಾನು ಅಪೇಕ್ಷಿಸುತ್ತೇನೆ. ಬಹುಶ ನಿನಗೆ ನಿನ್ನ ಮಾರ್ಗಗಳನ್ನು ಬದಲಾಯಿಸಬೇಕಾಗಬಹುದು. ನೀನು ಕೇವಲ ಸಣ್ಣಕಾರ್ಯಗಳಿಂದ ಪ್ರಾರಂಭಿಸಬಹುದು - ಈಗಿನಿಂದಲೇ ಪ್ರತಿ ಬುಧವಾರದ ರಾತ್ರಿ ಆರಾಧನೆಗೆ ಬರುವುದನ್ನು ನಿರ್ಣಯಿಸಿಕೋ ಎಂದು ಹೇಳು. ಅಥವಾ ಒಂದು

ಸಂಪೂರ್ಣ ಬದಲಾವಣೆಯನ್ನು ಮಾಡಬೇಕಾಗಬಹುದು. ಬಹುಶಃ ಕರ್ತನಿಗೋಸ್ಕರ ನಿನ್ನ ಉತ್ಕಂಟಿತತೆಯನ್ನು, ಉಗುರುಬೆಚ್ಚಗಿನ ಜೀವಿತ, ಅಪನಂಬಿಗಸ್ತಿಕತೆ ದಾಲಿಯನ್ನು ಬಿಟ್ಟು ಮತ್ತು ಕ್ರಿಸ್ತನಿಗೆ ಹೊಸ ಸಮರ್ಪಣೆಯೊಂದಿಗೆ ತಿರುಗಿ ಆರಂಭಿಸುವದು.

ನಿನ್ನ ಕ್ರೈಸ್ತತ್ವದ ಬಗೆಗೆ ಆಲೋಚಿಸು. ಇದು ಆ ಐಶ್ವರ್ಯವಂತನಾದ ಅಧಿಕಾಲಿಯ ಧರ್ಮದಂತಿರುವದೇ? ಅಥವಾ ಇದು "ಕ್ರಾಂತಿಕಾರಕವಾದ" ಕ್ರೈಸ್ತತ್ವದಂತಿದೆಯೇ?